ಶಾಲಾ ಮತ್ತು ಕಾಲೇಜು ಆವರಣದ ಸುತ್ತ ತಂಬಾಕು ಮಾರಾಟ

1668 (2801); ಡಾ॥ ಅಶ್ವಥ್ ನಾರಾಯಣ ಸಿ. ಎನ್. (ಮಲ್ಲೇಶ್ವರಂ)

ಅ) 7 states have benned, chewing tobacco products based on union government orders. Why can't Karnataka follow these states; If this is not done, Gutka ban will not be effective as people have started consuming it in separate pouches;

ಆ) Sale of tobacco around schools is prohibited around 100 yards of schools; but yet we still see the sale keeps goinf on; what steps have Government taken to have coordination between education and home dept. to implement this is a monthly report generated by education dept. which gives details of sale of tobacco around schools. This can be shared with home dept. districtwise, between DDPI and SP for effective implementation;

ಇ) We have recently heard that Gadag was declared as model district for India to implementation of COTPA. Can we not make entire state implement this similar way, especiaaly Bangalore to be a model. Tobacca is a legal addictive substance that, leads to other illegal drugs addiction and this could heldp home dept. control drug issue too.

ಶ್ರೀ ಯು. ಟಿ. ಖಾದರ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ದಿನಾಂಕ: 30.05.2013 ರಂದು ಹೊರಡಿಸಲಾದ ಆದೇಶದಂತೆ ಕರ್ನಾಟಕ ರಾಜ್ಯದಲ್ಲಿ ಗುಟ್ಕಾ ಪದಾರ್ಥಗಳನ್ನು ನಿಷೇಧಿಸಲಾಗಿದ್ದು, ಸದರಿ ಆದೇಶದಂತೆ ಹಾಗೂ ಆಹಾರ ಸಂರಕ್ಷಣಾ ಅಧಿನಿಯಮ 2006ರ

ಕಾನೂನಿನ ಪ್ರಕಾರ ನಿಕೋಟಿನ್ ಮತ್ತು ಅಥವಾ ತಂಬಾಕುಯುಕ್ತ ಆಹಾರ ಪದಾರ್ಥವಾಗಿರುವ ಗುಟ್ಕಾ ಪದಾರ್ಥಗಳನ್ನು ಮಾತ್ರ ನಿಷೇಧ ಮಾಡಲು ಪದಾರ್ಥಗಳನ್ನು ಪ್ರತ್ಯೇಕ ಪ್ಯಾಕೇಟ್‌ನಲ್ಲಿ ಮಾರಾಟ ಮಾಡುವುದನ್ನು ನಿಯಂತ್ರಿಸಲು ಪ್ರತ್ಯೇಕ ಪ್ಯಾಕೇಟ್‌ನಲ್ಲಿ ಮಾರಾಟ ಮಾಡುವುದನ್ನು ನಿಯಂತ್ರಿಸಲು ಸದರಿ ಕಾನೂನಿನಲ್ಲಿ ಅವಕಾಶವಿರುವುದಿಲ್ಲ. ಕೆಲ ರಾಜ್ಯಗಳಲ್ಲಿ ಗುಟ್ಕಾ ಸೇರಿದಂತೆ ಜರ್ದಾ ಸಹ ಆಹಾರ ಪದಾರ್ಥ ಎಂದು ಪರಿಗಣಿಸಿ ನಿಷೇಧಿಸಲಾಗಿದೆ.

ಆ) ಶಾಲಾ ಕಾಲೇಜುಗಳ ಸುತ್ತ 100 ಯಾರ್ಡ್ ಅಂತರದಲ್ಲಿ ಈಗಾಗಲೇ ತಂಬಾಕು ಯುಕ್ತ ವಸ್ತುಗಳನ್ನು ಕೋಟಾ (The Cigarette and Other Tobacco Products Act-2003) ಕಾಯ್ದೆಯಡಿ ನಿಷೇಧಿಸಲಾಗಿದ್ದು, ಅದರಂತೆಯೇ ಶಿಕ್ಷಣ ಇಲಾಖೆಯು ಸಹ ರಾಜ್ಯದ ಎಲ್ಲಾ ಶಾಲಾ ಕಾಲೇಜು ಆವರಣಗಳಲ್ಲಿ ನಾಮಫಲಕಗಳನ್ನು ತಾಕುವ ಮೂಲಕ ಈ ಬಗ್ಗೆ ಕ್ರಮವಹಿಸುತ್ತಿದ್ದು, ಮಾಸಿಕವಾಗಿ ನಡೆಯುವ ಜಿಲ್ಲಾ ಹಂತದ ಡಿ.ಸಿ.ಆರ್.ಐ. ಸಭೆಗಳಲ್ಲಿ ಈ ಬಗ್ಗೆ ಪೊಲೀಸ್ ಇಲಾಖೆ ವತಿಯಿಂದ ಚರ್ಚಿಸಲಾಗುತ್ತಿದೆ. ಶಿಕ್ಷಣ ಇಲಾಖೆ ವತಿಯಿಂದ ಇಂತಹ ಪ್ರಕರಣಗಳು ಕಂಡು ಬಂದಲ್ಲಿ ಸಮೀಪದ ಪೊಲೀಸ್ ಠಾಣೆಗೆ ತಿಳಿಸುವ ಮುಖೇನ ಹಾಗೂ ಜಿಲ್ಲಾ ಪೊಲೀಸ್ ಅಧೀಕ್ಷಕರಿಗೆ ಕೋಲ್ಟಾ ಉಲ್ಲಂಘನೆ ಪ್ರಕರಣಗಳ ಬಗ್ಗೆ ಮಾಹಿತಿ ನೀಡುವ ಮೂಲಕ ತಂಬಾಕು ನಿಯಂತ್ರಣ ಮಾಡಲು ಕ್ರಮ ವಹಿಸಲಾಗುತ್ತಿದೆ.

ಇ) ಈಗಾಗಲೇ ಗದಗ ಜಿಲ್ಲೆಯನ್ನು ಕೋಟ್ಪಾ ಅನುಸರಣೀಯ ಮಾದರಿ ಜಿಲ್ಲೆಯನ್ನಾಗಿ ಘೋಷಣೆ ಮಾಡಿ ಅದರಂತೆಯೇ ಕೋಲಾರ ಜಿಲ್ಲೆಯನ್ನು ಸಹ ಕೋಟ್ಪಾ (The Cigarette and Other Tobacco Products Act-2003) ಕಾಯ್ದೆಯಡಿಯಲ್ಲಿ ಒಂದು ಉತ್ತಮ ಅನುಸರಣ ಜಿಲ್ಲೆಯನ್ನಾಗಿ ಮಾಡಲು ಪ್ರಯತ್ನಿಸುತ್ತಿದ್ದು, ಬೆಂಗಳೂರು ನಗರದಲ್ಲಿಯೂ ಜಿಲ್ಲಾ ತಂಬಾಕು ನಿಷೇಧ ಕೋಶವನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಹಯೋಗದೊಂದಿಗೆ ತೆರೆಯಲಾ

ಗಿದ್ದು, ಬೆಂಗಳೂರಿನ ಎಲ್ಲೆ ಪ್ರಮಾಣ ಜಾಸ್ತಿ ಇರುವುದರಿಂದ ಕೋಟ್ಪಾ ಅನುಸರಣೆ ಜಿಲ್ಲೆಯನ್ನಾಗಿ ಮಾಡಲು ಮುಂದಿನ ದಿನಗಳಲ್ಲಿ ಹಂತ ಹಂತವಾಗಿ ಇತರೆ ಇಲಾಖೆಗಳ ಸಹಯೋಗದೊಂದಿಗೆ ಪ್ರಯತ್ನಿಸ ಲಾಗುವುದು.

ಆರೋಗ್ಯ ಘಟಕವನ್ನು ಪ್ರಾರಂಭಿಸುವುದು.

1669 (2636); ಡಾ॥ ಕೆ. ಶ್ರೀನಿವಾಸಮೂರ್ತಿ (ನೆಲಮಂಗಲ)

ಅ) ಗೌರವಾನ್ವಿತ ಹಿರಿಯ ಚಲನಚಿತ್ರ ನಟಿ ಶ್ರೀಮತಿ ಲೀಲಾವತಿಯವರು ನೆಲಮಂಗಲ ಮತಕ್ಷೇತ್ರದ ವ್ಯಾಪ್ತಿಯಲ್ಲಿನ ಸೋಲದೇವನಹಳ್ಳಿ ಗ್ರಾಮ ಪಂಚಾಯತಿಯಲ್ಲಿ ಆರೋಗ್ಯ ಘಟಕವನ್ನು ಸ್ಥಾಪಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಆರೋಗ್ಯ ಘಟಕವನ್ನು ತೆರೆಯಲು ಸರ್ಕಾರದ ಎಲ್ಲಾ ನಿಯಮಾವಳಿಗಳನ್ನು ಪಾಲಿಸಲಾಗಿದೆಯೇ;

ಇ) ಹಾಗಿದ್ದಲ್ಲಿ ಈ ಘಟಕಕ್ಕೆ ವೈದ್ಯಾಧಿಕಾರಿಗಳು ಹಾಗೂ ಇತರೆ ಸಿಬ್ಬಂದಿ ವರ್ಗವನ್ನು ಯಾವಾಗ ಭರ್ತಿ ಮಾಡಲಾಗುವುದು?

ಶ್ರೀ ಯು. ಟಿ. ಖಾದರ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಬಂದಿದೆ.

ಆ) ಹೊಸದಾಗಿ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಸ್ಥಾಪಿಸಲು ಮೂರು ಷರತ್ತುಗಳನ್ನು ಪೂರೈಸಬೇಕಾಗಿರುತ್ತದೆ. ಅವು ಯಾವುವೆಂದರೆ,

1) 2 ಎಕರೆ ಜಮೀನನ್ನು ಒದಗಿಸಬೇಕಾಗಿರುತ್ತದೆ.

2) ₹1.00 ಲಕ್ಷ ವಂತಿಕೆಯನ್ನು ಸರ್ಕಾರಕ್ಕೆ ಜಮಾ ಮಾಡಬೇಕಾಗಿ ರುತ್ತದೆ.

3) ಆಸ್ಪತ್ರೆ ನಡೆಲು ತಾತ್ಕಾಲಿಕ ಕಟ್ಟಡವನ್ನು ನೀಡಬೇಕಾಗಿರುತ್ತದೆ.